ಓ.ಎಸ್ ನಂ.40/2016 ಪಿ.ಡಬ್ಲ್ಯೂ1

ಸಾಕ್ಷಿಯ ಹೆಸರುಃ ಕುಮಾರಸ್ವಾಮಿ ಪಿ.

ದಿನಾಂಕಃ **27-09-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ **1** ಮತ್ತು **2** ನೇ ಪ್ರತಿವಾದಿಗಳ ಪರ ಶ್ರೀ ಎಂ**.**ಸಿ**.**ಎಸ್**.** ವಕೀಲರಿಂದಃ

5) 3 ರಿಂದ 7 ನೇ ಪ್ರತಿವಾದಿಗಳ ಸಹಿಗಳನ್ನು ನಿಪಿ-01 ಕ್ಕೆ ತೆಗೆದುಕೊಳ್ಳುವುದು ಅವಶ್ಯಕವಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು 1 ಮತ್ತು 2 ನೇ ಪ್ರತಿವಾದಿಯರು ತಾವು ಅವರ ಸಹಿಗಳನ್ನು ಹಾಕಿಸಿಕೊಡುವುದಾಗಿ ಬರವಸೆ ನೀಡಿದ್ದರು ಎನ್ನುತ್ತಾರೆ. ನಿಪಿ-01 ರಲ್ಲಿ ಎರಡು ವರ್ಷ ವಾಯಿದೆ ಎಂದು ತಿಳಿಸಿರುತ್ತದೆ ಎಂದರೆ ಸರಿ. ಆದರೂ ಕೂಡ 1 ವರ್ಷದ ಅವಧಿಯ ಒಳಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ ಎಂದರೆ ಸರಿ. ಈ ಕ್ರಯದ ಕರಾರುಪತ್ರದ ಅವಧಿ 02 ವರ್ಷಗಳು ದಿನಾಂಕಃ26.08.2016 ರವರೆಗೆ ಇತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು 15 ದಿನಗಳ ಒಳಗೆ ತಿಳಿಸುವುದಾಗಿ ಹೇಳಿದ್ದರೂ ಸಹ, ಅವರು ತಿಳಿಸಿಲ್ಲದ ಕಾರಣ ನಾನು ಅವರನ್ನು ಹಲವಾರು ಭೇಟಿ ಮಾಡಲು ಪ್ರಯತ್ನ ಮಾಡಿ ಅವರು ಸಿಗಲಿಲ್ಲದಾಗ ನಾನು ಅವರಿಗೆ ನೋಟೀಸನ್ನು ನೀಡಿರುತ್ತೇನೆ ಎನ್ನುತ್ತಾರೆ. ನಾನು ಎರಡು ವರ್ಷದ ಅವಧಿ ಮುಗಿಯುವ ಮುನ್ನವೇ ಅಂದರೆ ದಿನಾಂಕಃ11.08.2015 ರಂದು ನೋಟಿಸನ್ನು ನೀಡಿರುತ್ತೇನೆ ಎಂದರೆ ಸರಿ. ನಾನು ಬಡ್ಡಿಗೋಸ್ಕರ ಹಣವನ್ನು ಪ್ರತಿವಾದಿಯರಿಗೆ

ನೀಡಿದ್ದು, ಅವರು ಬಡ್ಡಿ ಹಣ ನೀಡದೇ ಇದ್ದಾಗ ನಾನು ಅವರಿಗೆ ನೋಟೀಸನ್ನು ನೀಡಿರುತ್ತೇನೆ ಎಂದರೆ ಸುಳ್ಳು. ಒಂದು ವೇಳೆ ನಿಪಿ-01 ಕ್ರಯದ ಕರಾರುಪತ್ರವೇ ಆಗಿದ್ದರೆ ಅದನ್ನು ಎರಡು ವರ್ಷದ ಅವಧಿ ಮುಗಿಯುವ ಹಂತದಲ್ಲಿ ನೋಟೀಸನ್ನು ನೀಡುತ್ತಿದ್ದೆ ಎಂದರೆ ಸಾಕ್ಷಿ ಇದು ನಿಜವಾದ ಕ್ರಯದ ಕರಾರುಪತ್ರವೇ ಆಗಿದೆ ಎನ್ನುತ್ತಾರೆ ಪ್ರತಿವಾದಿಯರು 15 ದಿನಗಳೊಳಗೆ ಕ್ರಯದ ಕರಾರುಪತ್ರದ ಷರತ್ತುಗಳನ್ನು ಅನುಸರಿಸುತ್ತೇವೆ ಎಂದು ಹೇಳಿರುವ ಬಗ್ಗೆ ನಿಪಿ-01 ರಲ್ಲಿ ಒಕ್ಕಣಿಕೆಗಳು ಇರುವುದಿಲ್ಲ. ಕಂದಾಯ ಇಲಾಖೆಯಲ್ಲಿ ಯಾವುದೇ ದಾಖಲೆಗಳನ್ನು ಕ್ರೋಢೀಕರಿಸಲು ಸುಮಾರು 6 ತಿಂಗಳುಗಳ ಕಾಲ ಬೇಕಾಗುತ್ತದೆ ಎಂದರೆ ಬೇಕಾಗುವುದಿಲ್ಲ. ಸಾಮಾನ್ಯವಾಗಿ ಸರ್ವೆ ಸ್ಕೆಚ್‌ಗಳನ್ನು 15 ದಿನಗಳೊಳಗೆ ಪಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ.

6) ಪ್ರತಿವಾದಿಯರು ನನ್ನೊಂದಿಗೆ ಜಮೀನು ಮಾರಾಟ ಮಾಡಲು ಯಾವುದೇ ಕ್ರಯದ ಕರಾರು ಪತ್ರ ಮಾಡಿಕೊಂಡಿರಲಿಲ್ಲ, ಆದರೆ ಇದು ಶೇ.3 ರಷ್ಟು ಬಡ್ಡಿಗೆ ನೀಡಿದ ಸಾಲವಾಗಿತ್ತು ಎಂದರೆ ಸುಳ್ಳು. ರೂ.5,00,000/-ಗಳ ಸಾಲದ ಭದ್ರತೆಗೋಸ್ಕರ ನಿಪಿ-01 ರ ಕ್ರಯದ ಕರಾರುಪತ್ರವನ್ನು ಬರೆಯಲಾಗಿದೆ ಎಂದರೆ ಸುಳ್ಳು. ಈ ಪತ್ರದೊಂದಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ದೊಡ್ಡಳ್ಳಿ ಶಾಖೆ, ಹೊಳೆನರಸೀಪುರ ತಾಲ್ಲೂಕಿಗೆ ಸಂಬಂಧಿಸಿದ 168691 ಮತ್ತು 168692 ಗಳ ಚೆಕ್‌ಗಳನ್ನು ನನಗೆ ನೀಡಿರುತ್ತಾರೆ ಎಂದರೆ ಸುಳ್ಳು. ಅಲ್ಲದೇ ರೂ.500/- ಮುಖಬೆಲೆಯ ಖಾಲಿಸ್ಟಾಂಪ್ ಪೇಪರ್ ಅನ್ನು ನನಗೆ ನೀಡಿರುತ್ತಾರೆ ಎಂದರೆ ಸುಳ್ಳು. ಪ್ರತಿವಾದಿಯರು ಎಲ್ಲ ಹಣವನ್ನು ವಾಪಸ್ಸು ಕೊಟ್ಟಿದ್ದರೂ ಸಹ ಅಧಿಕ ಬಡ್ಡಿ ಪಡೆಯುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸುಳ್ಳು. ನಾನು ಬೆಂಗಳೂರಿನಲ್ಲಿ ಅಕ್ರಮವಾಗಿ ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸುಳ್ಳು.

7) ನನ್ನ ಮೂಲ ಊರು ಬೆಂಗಳೂರು. ನಾನು ಬೆಂಗಳೂರಿನಲ್ಲಿ ವಾಸವಾಗಿದ್ದರಿಂದ, ಕೆ.ಆರ್.ನಗರಕ್ಕೆ ಬಂದು ವ್ಯವಸಾಯ ಮಾಡುವ ಅವಶ್ಯಕತೆ ಇರುವುದಿಲ್ಲ, ಆದ್ದರಿಂದ ಬಡ್ಡಿಗೋಸ್ಕರ ನಾನು ಪ್ರತಿವಾದಿಯರಿಗೆ ಈ ಕ್ರಯದ ಕರಾರುಪತ್ರವನ್ನು ಬರೆಯಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು

ಕೊಳ್ಳಲು ಮೇಲಾಧಿಕಾರಿಯವರಿಂದ ಅನುಮತಿ ಪಡೆದಿರುತ್ತೀರಾ ಎಂದರೆ ಸಾಕ್ಷಿ ಕ್ರಯದ ಕರಾರು ಪತ್ರಕ್ಕೆ ಅನುಮತಿ ಬೇಕಾಗಿಲ್ಲ ಕ್ರಯಪತ್ರ ಮಾಡಿಕೊಳ್ಳುವಾಗ ಅನುಮತಿ ಪಡೆದುಕೊಳ್ಳುತ್ತೇನೆ ಎನ್ನುತ್ತಾರೆ.

<u>ಪಾಟೀ ಸವಾಲುಃ **3** ರಿಂದ **7** ನೇ ಪ್ರತಿವಾದಿಗಳ ಪರ ಶ್ರೀ ಕೆ**.**ಪಿ**.**ಎಂ**.** ವಕೀಲರಿಂದಃ</u>

8) ದಾವಾಸ್ವತ್ತನ್ನು ಕ್ರಯದ ಕರಾರು ಪತ್ರ ಬರೆಯಿಸಿಕೊಳ್ಳುವ ಮುನ್ನ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದಾರೆ ಎಂದರೆ ಸಾಕ್ಷಿ ಇಸಿ ಮತ್ತು ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ ಎನ್ನುತ್ತಾರೆ. ನಿಪಿ-01 ರಲ್ಲಿ ಷೆಡ್ಯೂಲ್ ಸ್ವತ್ತು 2 ನೇ ಪಾರ್ಟಿಯವರ ಪಿತ್ರಾರ್ಜಿತ ಸ್ವತ್ತು ಎಂದು ಬರೆದಿದೆ ಎಂದರೆ ಸಾಕ್ಷಿ ಪ್ರತಿವಾದಿಯರು ಹಾಗೆ ಹೇಳಿದ್ದರು ಎನ್ನುತ್ತಾರೆ. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದರಿಂದ ಎಲ್ಲಾ ವಾರಸುದಾರರು ಸಹಿ ಪಡೆಯಬೇಕಾಗಿದ್ದು ನನ್ನ ಕರ್ತವ್ಯವಾಗಿತ್ತು ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರು ಕ್ರಯ ಪತ್ರ ನೊಂದಣಿ ಸಮಯದಲ್ಲಿ ಪಡೆಯುವುದಾಗಿ ಹೇಳಿದ್ದರು ಎನ್ನುತ್ತಾರೆ.

9) ನಾನು ಮಾಡಿಕೊಂಡ ಕ್ರಯದ ಕರಾರು ಪತ್ರ 3 ರಿಂದ 7 ನೇ ಪ್ರತಿವಾದಿಗಳಿಗೆ ಬಂದನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ನಾನು, 1 ಮತ್ತು 2 ನೇ ಪ್ರತಿವಾದಿಗಳು ಸೇರಿ 3 ರಿಂದ 7 ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಕ್ರಯದ ಕರಾರುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸುಳ್ಳು. ನಾನು, 1 ಮತ್ತು 2 ನೇ ಪ್ರತಿವಾದಿಗಳೊಂದಿಗೆ ಹಣದ ವ್ಯವಹಾರ ಮಾಡಿ 3 ರಿಂದ 7 ನೇ ಪ್ರತಿವಾದಿಯರ ಆಸ್ತಿಯನ್ನು ಕಬಳಿಸಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 3 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರು 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲು ಕೋರಿಕೊಂಡಿರುತ್ತಾರೆ.

<u>ಪಾಟೀ ಸವಾಲು **8** ಮತ್ತು **9** ನೇ ಪ್ರತಿವಾದಿಯರು ಏಕಪಕ್ಷೀಯವಾಗಿರುತ್ತಾರೆ**.**</u>

<u>ಮರು ವಿಚಾರಣೆಃ ಇಲ್ಲ**.**</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ.ಕೇ.ಸ.ಇ.ಒ.,**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.